# ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 4** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಆರಿಸಿದ ಭಾಗ : ನುಡಿ ಆಟಗಳು**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಮಾರ್ಚ್ 1 ನೇ ವಾರ** | * ಅಭಿನಯ ಗೀತೆಯನ್ನು ಹಾಡುವರು ಮತ್ತು ವಿವಿಧ ತರಕಾರಿಗಳನ್ನು ಹೆಸರಿಸುವರು.<br><br>* ಮಹಾಭಾರತದ ಪ್ರಮುಖ ಪಾತ್ರಗಳ ಬಗ್ಗೆ ತಿಳಿಯುವರು.<br><br>* ಹೊಸಪದಗಳ ರಚನೆ ಮಾಡುವರು. | * ಶಿಕ್ಷಕರು ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ವಿವಿಧ ತರಕಾರಿಗಳ ಚಿತ್ರಪಟ ತೋರಿಸಿ(ನೈಜವಾದ ತರಕಾರಿಗಳನ್ನು) ಅವುಗಳ ಹೆಸರನ್ನು ಹೇಳಲು ಪ್ರೋತ್ಸಾಹ ನೀಡುವುದು.<br>ತರಕಾರಿಗೆ ಸಂಬಂಧಿಸಿದ ಹಾಡನ್ನು ಅಭಿನಯಪೂರ್ವಕವಾಗಿ ಹಾಡಿಸುವುದು.<br><br>* ದ್ರೋಣಾಚಾರ್ಯ, ದುರ್ಯೋಧನ, ಕೃಷ್ಣ, ಅಭಿಮನ್ಯು, ಭೀಮಸೇನ, ಧರ್ಮರಾಯ, ಏಕಲವ್ಯ, ಶ್ರವಣಕುಮಾರ, ಅರ್ಜುನ ಮುಂತಾದ ಮಹಾಭಾರತದ ಪಾತ್ರಗಳ ಬಗ್ಗೆ ತಿಳಿಯಲು ಉತ್ತೇಜಿಸುವುದು.<br><br>* ಶಿಕ್ಷಕರು ಮಿಂಚುಪಟ್ಟಿ ಪ್ರದರ್ಶಿಸುತ್ತಾ ಕೆಲವು ಮಾದರಿ ಪದ ರಚನೆಯನ್ನು ತೋರಿಸಿ ಅದರಂತೆ ಹೊಸ ಪದಗಳನ್ನು ರಚಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು.<br>ಉದಾ :<br> | ನಿನಗೆ ತಿಳಿದಿರುವ ತರಕಾರಿಗಳ ಹೆಸರನ್ನು ಪಟ್ಟಿ ಮಾಡು<br><br>ಈ ವ್ಯಕ್ತಿಗಳ ಬಗ್ಗೆ ಹಿರಿಯರಿಂದ ತಿಳಿದು ತರಗತಿಯಲ್ಲಿ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.<br><br>ಮಾದರಿ ವೀಕ್ಷಿಸಿ ಹೊಸಪದಗಳನ್ನು ರಚಿಸುವರು |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 2 ನೇ ವಾರ** | * 'ದ್ವಿಮುಖಿ' ಪದಗಳ ಬಗ್ಗೆ ತಿಳಿಯುವರು. | * ಎಡದಿಂದ ಬಲಕ್ಕೆ – ಬಲದಿಂದ ಎಡಕ್ಕೆ ಹೇಗೆ ಓದಿದರೂ ಒಂದೇ ಅರ್ಥ ಬರುವ ಪದಗಳು ದ್ವಿಮುಖಿ ಪದಗಳು<br>ಉದಾ :<br>ನಯನ, ಕಿಟಕಿ, ಜಲಜ, ಗುಡುಗು | ದ್ವಿಮುಖಿ ಪದಗಳ ಪಟ್ಟಿ ಮಾಡಿ |
| | | * ಒತ್ತಕ್ಷರಗಳ ಬಗ್ಗೆ ತಿಳಿಯುವರು. | * ಶಿಕ್ಷಕರು ಒತ್ತಕ್ಷರದ ಪದಗಳ ಮಿಂಚುಪಟ್ಟಿ ಕೊಟ್ಟು ಓದಲು ತಿಳಿಸುವುದು, ನಂತರ ಮೂಲಾಕ್ಷರವನ್ನೇ ಹೋಲುವ ಒತ್ತಕ್ಷರ ಪದಗಳು, ಮೂಲಾಕ್ಷರಕ್ಕಿಂತ ಭಿನ್ನವಾದ ಒತ್ತಕ್ಷರ ಪದಗಳು ಹಾಗೂ ತಲೆಕಟ್ಟು ರಹಿತ ಒತ್ತಕ್ಷರ ಪದಗಳನ್ನು ಗುರ್ತಿಸಲು ತಿಳಿಸುವುದು.<br>ಉದಾ :<br>ಅಜ್ಜ, ಹಬ್ಬ, ಅಣ್ಣ, ಹುತ್ತ, ಅನ್ನ, ತಮ್ಮ, ಅಕ್ಕ, ಹಗ್ಗ<br>ನಂತರ ಎಲ್ಲಾ ವ್ಯಂಜನಾಕ್ಷರಗಳ ಒತ್ತಕ್ಷರ ಪಟ್ಟಿ ತಯಾರಿಸಿ ಪ್ರದರ್ಶಿಸುವುದರ ಜೊತೆಗೆ ಪ್ರತಿಯೊಂದು ಒತ್ತಕ್ಷರಕ್ಕೂ ಒಂದೊಂದು ಪದ ರಚಿಸಲು ಪ್ರೋತ್ಸಾಹಿಸುವರು. | ವೀಕ್ಷಿಸಿ ಗುರುತಿಸುವರು.<br>ಒತ್ತಕ್ಷರ ಪದಗಳ ಪಟ್ಟಿ ಮಾಡುವರು. |
| | | * ಒಗಟುಗಳನ್ನು ಅರ್ಥಮಾಡಿಕೊಂಡು ಉತ್ತರಿಸಲು ಪ್ರಯತ್ನಿಸುವರು. | * ಸರಳವಾದ ಒಗಟುಗಳನ್ನು ಹೇಳಿ ಮಕ್ಕಳಿಗೆ ಉತ್ತರಿಸಲು ತಿಳಿಸುವುದು. ಒಗಟುಗಳ ಸಹಾಯದಿಂದ ಸರಿಯುತ್ತರವನ್ನು ಆಲೋಚಿಸುವ, ವಾಕ್ಯದಲ್ಲಿನ ಹೋಲಿಕೆಯನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಬೆಳೆಸುವುದು.<br>'ಹುಟ್ಟುವಾಗ ಕೆಂಪು ಕಣ್ಣಿಗೆ ತಂಪು ಏರಿದಾಗ ನೆತ್ತಿ ಕೆಂಡ ಇಳಿದಾಗ ಹೂವಿನ ಕುಂಡ ನಾನು ಯಾರು? – ಸೂರ್ಯ | ನಿಮ್ಮ ಹಿರಿಯರಿಂದ ಒಗಟುಗಳನ್ನು ಕೇಳಿ ತಿಳಿದು ತರಗತಿಯಲ್ಲಿ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿರಿ. |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಹೊಸ ಪದಗಳನ್ನು ರಚಿಸುವರು. | * ಒಂದು ಪದ ಅಥವಾ ವಾಕ್ಯದಲ್ಲಿರುವ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸುವುದನ್ನು ಮಕ್ಕಳಿಗೆ ತಿಳಿಸಿಕೊಟ್ಟು ಹೊಸ ಪದ ರಚಿಸಲು ಉತ್ತೇಜಿಸುವುದು.<br>ಉದಾ : **ಸರಕಾರದ ಹೊಸಯೋಜನೆ**<br>ಕಾರ, ದರ, ಸರ, ರಸ, ಹೊರ, ಸಜ, ಹೊಸ, ದಸರ | ವೀಕ್ಷಣೆ/ಅನುಕರಣೆ<br><br>ಹೊಸ ಪದಗಳನ್ನು ರಚಿಸುವರು<br>ಅಭ್ಯಾಸ ಹಾಳೆ ಬಳಕೆ |
| | **ಮಾರ್ಚ್ 3 ನೇ ವಾರ ಮತ್ತು 4ನೇ ವಾರ** | * ಪುನರಾವರ್ತನೆ | * ಶೈಕ್ಷಣಿಕ ವರ್ಷದ ಪ್ರಾರಂಭದಿಂದ ಇಲ್ಲಿಯವರೆಗೆ ಆಯೋಜಿಸಿರುವ ಕಲಿಕಾ ಚಟುವಟಿಕೆಗಳನ್ನು ಮಕ್ಕಳ ಕಲಿಕಾ ಆದ್ಯತೆಗನುಸಾರವಾಗಿ ಪುನರಾವರ್ತನೆ ಕಾರ್ಯವನ್ನು ಕೈಗೊಳ್ಳಲು ಶಿಕ್ಷಕರು ಸ್ವತಂತ್ರರು. ಲಭ್ಯವಿರುವ ಕಲಿಕಾ ಅವಧಿಯನ್ನು ಗರಿಷ್ಠ ಕಲಿಕೆಗೆ ಬಳಸಿಕೊಂಡು ಮಕ್ಕಳ ಕಲಿಕಾ ಮಟ್ಟವನ್ನು ಉತ್ತಮಗೊಳಿಸುವುದು. | |

# ಅಭ್ಯಾಸದ ಹಾಳೆ – 1

ತರಗತಿ : 4 | ಆರಿಸಿದ ಭಾಗ : ನುಡಿ ಆಟಗಳು | ಮಾರ್ಚ್ – 2022

---

☞ ಮಾದರಿಯಂತೆ ಪದ ರಚಿಸು:

ಮಾದರಿ 1 : ನುಡಿಹಬ್ಬ

ಹಬ್ಬ
- ನುಡಿ
- ದಸರ
- ಜಾನಪದ
- ನಗೆ
- ಮಾರಿ

☞ ಕೊಟ್ಟಿರುವ ಸುಳುಹುಗಳನ್ನು ಬಳಸಿಕೊಂಡು ಒಗಟುಗಳಿಗೆ ಉತ್ತರಿಸು:

(ಕಪ್ಪೆ, ಮೊಟ್ಟೆ, ಕಣ್ಣು)

1. ಗೂಡಿನಲ್ಲಿರುವ ಪಕ್ಷಿ ನಾಡೆಲ್ಲ ನೋಡುತ್ತದೆ. ____________________
2. ಸುತ್ತಮುತ್ತ ಸುಣ್ಣದ ಗೋಡೆ ಎತ್ತ ನೋಡಿದರೂ ಬಾಗಿಲಿಲ್ಲ _____________
3. ಹಾರಿದರೆ ಹನುಮಂತ, ಕೂತರೆ ಮುನಿ, ಕೋಗಿದರೆ ಕಾಡಿನ ಒಡೆಯ _________________

☞ ಮಾದರಿಯಂತೆ ಪದಗಳ ಸರಿಯಾದ ರೂಪವನ್ನು ಬರೆಯಿರಿ:

ಮಾದರಿ : ಅಪ – ಅಪ್ಪ

1. ಬೆಟ –
2. ಹಬ –
3. ಅನ –
4. ಅವ –
5. ಯುದ –